RNU AIR DHARWAD

# JANUARY 10, 2026

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

ಋತುಚಕ್ರ ನೈರ್ಮಲ್ಯ; ಹದಿಹರೆಯದ ಹೆಣ್ಣುಮಕ್ಕಳಿಗಾಗಿ, 'ಶುಚಿ' ಯೋಜನೆಗೆ ಆರೋಗ್ಯ ಇಲಾಖೆ ಮರುಚಾಲನೆ.

ಕರ್ನಾಟಕ ವಿಶ್ವವಿದ್ಯಾಲಯದ, ಕೌಸಾಳಿ ವ್ಯವಹಾರ ನಿರ್ವಹಣಾ ಸಂಸ್ಥೆಗೆ, ಸುವರ್ಣ ಮಹೋತ್ಸವ ಸಂಭ್ರಮ.

ಮಂಗಳೂರಿನ ಕದ್ರಿ ಉದ್ಯಾನವನದಲ್ಲಿ, ರಾಷ್ಟ್ರೀಯ ಚಿತ್ರ, ಶಿಲ್ಪ ಸಾಂಸ್ಕೃತಿಕ ಮೇಳ, 'ಕಲಾಪರ್ಬ'ಕ್ಕೆ, ಚಾಲನೆ.

ತೀವ್ರ ಶೀತಗಾಳಿ ಹಿನ್ನೆಲೆ, ರಾಜ್ಯದ 7 ಜಿಲ್ಲೆಗಳಿಗೆ, ಮುಂದಿನ 48 ಗಂಟೆಗಳ ವರೆಗೆ, ಯೆಲ್ಲೋ ಅಲರ್ಟ್, ಘೋಷಣೆ.

<><><>

ಈಗ ವಾರ್ತೆಗಳ ವಿವರ

<><><>

ಋತುಚಕ್ರ ನೈರ್ಮಲ್ಯ ಕಾಪಾಡಲು, ಹದಿಹರೆಯದ ಹೆಣ್ಣುಮಕ್ಕಳಿಗಾಗಿ, 'ಶುಚಿ' ಯೋಜನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮರುಚಾಲನೆ ನೀಡಿದೆ. 'ಶುಚಿ' ಯೋಜನೆ, ಸರ್ಕಾರಿ ಹಾಗೂ ಅನುದಾನಿತ ಶಾಲೆ, ಕಾಲೇಜು ಮತ್ತು ವಸತಿ ನಿಲಯಗಳಲ್ಲಿ ನೋಂದಾಯಿತ ವಿದ್ಯಾರ್ಥಿನಿಯರನ್ನು, ತಲುಪಲಿದೆ. 71 ಕೋಟಿ 83 ಲಕ್ಷ ರೂಪಾಯಿ ಅನುದಾನ ಬಿಡುಗಡೆಯಾಗಿದ್ದು, 2 ಕೋಟಿ 35 ಲಕ್ಷ 74 ಸಾವಿರದ 84 ಸ್ಯಾನಿಟರಿ ಪ್ಯಾಡ್ ಯುನಿಟ್‌ಗಳ ವಿತರಣೆ ಮಾಡಲಾಗುತ್ತಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಎಕ್ಸ್ ಜಾಲತಾಣದಲ್ಲಿ ಮಾಹಿತಿ ನೀಡಿ, ರಾಜ್ಯದ 19 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿನಿಯರ, ಆರೋಗ್ಯ ರಕ್ಷಣೆ ಇಲಾಖೆಯ ಪ್ರಮುಖ ಗುರಿಯಾಗಿದೆ. 10 ಲಕ್ಷ 38 ಸಾವಿರದ 912, ಸುಸ್ಥಿರ 'ಮುಟ್ಟಿನ ಕಪ್' ವಿತರಿಸಲಾಗುತ್ತಿದೆ, ಎಂದಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು, ನಂದಗಡದಲ್ಲಿ, 75 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ, ವೀರಭೂಮಿ ಸಂಗೊಳ್ಳಿ ರಾಯಣ್ಣ ವಸ್ತು ಸಂಗ್ರಹಾಲಯವನ್ನು, ಈ ತಿಂಗಳು 19 ನೇ ತಾರೀಖು, ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸಲಿದ್ದಾರೆ

ಎಂದು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ. ನಂದಗಡದಲ್ಲಿ, ವಸ್ತು ಸಂಗ್ರಹಾಲಯವನ್ನು ವೀಕ್ಷಿಸಿ, ಅಂತಿಮ ಹಂತದ ಸಿದ್ಧತೆಗಳನ್ನು ಸಚಿವರು ಪರಿಶೀಲಿಸಿದರು.

<><><>

ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ, ಕೆರೆಗಳ ಸಮಗ್ರ ಅಭಿವೃದ್ಧಿ ಹಾಗೂ ಜಲ ಸಂರಕ್ಷಣಾ ಕಾರ್ಯಗಳಿಗೆ, ಒತ್ತು ನೀಡಲಾಗುತ್ತಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ, ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ರಾಯಚೂರಿನ ಮಾವಿನ ಕೆರೆ ಅಭಿವೃದ್ಧಿ, ದೇವನಪಲ್ಲಿ ಕೆರೆ ಕಾಯಕಲ್ಪ ಹಾಗೂ ಚೀಕಲಪರ್ವಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಯೋಜನೆಯ ರೂಪುರೇಷೆ ಸಿದ್ಧಪಡಿಸಲಾಗಿದೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮಾಹಿತಿ ನೀಡಿದ್ದಾರೆ. 4 ಕೋಟಿ 50 ಲಕ್ಷ ರೂಪಾಯಿ ವೆಚ್ಚದಲ್ಲಿ, ಕೊಪ್ಪಳದ ಅಳವಂಡಿ ಕೆರೆ, ಗಿಣಿಗೇರಾ ಕೆರೆಗಳ ಅಭಿವೃದ್ಧಿಗೆ, ನೀಲನಕ್ಷೆ ರೂಪಿಸಿದ್ದಾಗಿ, ಸಚಿವರು, ಪ್ರಕಟಿಸಿದ್ದಾರೆ.

<><><>

ಹಾವೇರಿ ಜಿಲ್ಲೆ ಬ್ಯಾಡಗಿ ಪಟ್ಟಣ, ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಯಶವಂತಪುರ–ವಾಸ್ಕೋ ಡಿ ಗಾಮಾ ಎಕ್ಸಪ್ರೆಸ್ ಹಾಗೂ ಹುಬ್ಬಳ್ಳಿ–ಬೆಂಗಳೂರು ನ್ಯೂ ಸೂಪರ ಫಾಸ್ಟ್ ಎಕ್ಸ್‌ಪ್ರೆಸ್ ರೈಲುಗಳನ್ನು, ನಿಲುಗಡೆಗೆ ಕೋರಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ, ಜಿ.ಕೆ ಆದಪ್ಪಗೌಡರ ನೇತೃತ್ವದ ನಿಯೋಗ, ನೈಋತ್ಯ ರೇಲ್ವೆ ಹುಬ್ಬಳ್ಳಿ ವಲಯದ, ಮಹಾಪ್ರಬಂಧಕ ಮುಕುಲ್ ಸರನ್ ಮಾಥೂರ್ ಅವರಿಗೆ ಮನವಿ ಸಲ್ಲಿಸಿತು.

<><><>

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, 2ನೇ ಆವೃತ್ತಿಯ, 'ಸ್ವಚ್ಛ ಭಾರತ ಮಿಷನ್' ಹಾಗೂ ಸ್ವಚ್ಛತಾ ಹೀ ಸೇವಾ ಜನಾಂದೋಲನದಡಿ, 'ಸ್ವಚ್ಛ ಸಂಕಲ್ಪಕ್ಕಾಗಿ ಓಟ; ಪ್ರತಿ ಹೆಜ್ಜೆಯಲ್ಲೂ ಸ್ವಚ್ಛ ಭಾರತ' ಎಂಬ ಸಂದೇಶದೊಂದಿಗೆ, ನಾಳೆ ಬೆಳಗ್ಗೆ 7 ಗಂಟೆಗೆ, ಹುಬ್ಬಳ್ಳಿಯ ತೋಳನ ಕೆರೆಯಿಂದ, ಉಣಕಲ್ ಕೆರೆಯ ವರೆಗೆ ಮ್ಯಾರಥಾನ್ ಮತ್ತು ಸೈಕ್ಲೋಥಾನ್ ಆಯೋಜಿಸಿದೆ. ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು ಮಾಹಿತಿ ನೀಡಿದ್ದಾರೆ, ಮಹಾನಗರ ಪಾಲಿಕೆ ಆಯುಕ್ತ ರುದ್ರೇಶ ಘಾಳಿ.

<><><>

ರುದ್ರೇಶ ಘಾಳಿ ಧ್ವನಿ – 26 ಸೆಕೆಂದುಗಳು

<><><>

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮೂಡಿಗೆರೆಯ ಕ್ರಿಯೇಟಿವ್ ಮೈಂಡ್ಸ್ ಅಸೋಸಿಯೇಷನ್ ಸಹಯೋಗದಲ್ಲಿ, ಬರುವ 15ನೇ ತಾರೀಖು, ಚಿಕ್ಕಮಗಳೂರು ಜಿಲ್ಲೆಯ, ಎತ್ತಿನಭುಜದಲ್ಲಿ, ಚಾರಣ ಪರಿಸರ ಅಧ್ಯಯನ ಶಿಬಿರ ಹಾಗೂ ಸ್ವಚ್ಛತಾ ಆಂದೋಲನ ಆಯೋಜಿಸಲಾಗಿದೆ. ಆಸಕ್ತರು ತಮ್ಮ ಹೆಸರನ್ನು, ಈ ತಿಂಗಳ 14ನೇ ತಾರೀಖಿನೊಳಗೆ, ನೋಂದಾಯಿಸಲು ಕೋರಲಾಗಿದೆ.

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂಡುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕರ್ನಾಟಕ ವಿಶ್ವವಿದ್ಯಾಲಯದ, ಕೌಸಾಳಿ ವ್ಯವಹಾರ ನಿರ್ವಹಣಾ ಸಂಸ್ಥೆಯ, ಸುವರ್ಣ ಮಹೋತ್ಸವ ಸಂಭ್ರಮದ ಹಿನ್ನೆಲೆ, ಕಾರ್ಡಿಫ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ, ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿತವಾಗಿದೆ. ವಿಶ್ವವಿದ್ಯಾಲಯದ ಉಪ ಕುಲಪತಿ ಎ.ಎಂ ಖಾನ್ ಮಾಹಿತಿ ನೀಡಿ, ತನ್ನಿಮಿತ್ತ ಇಂದು, ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ ಆಯೋಜಿಸಲಾಗಿದ್ದು, ನಾಳೆ ಹಾಗೂ ನಾಡಿದ್ದು, ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಜರುಗಲಿದೆ ಎಂದರು. ಕೌಸಾಳಿ ವ್ಯವಹಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕ, ಪ್ರೊಫೆಸರ್ ಉತ್ತಮಕುಮಾರ ಕಿನ್ನಂಗೆ ಮಾಹಿತಿ ನೀಡಿ, ಕಾರ್ಡಿಫ್ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ನ ಹಿರಿಯ ಪ್ರಾಧ್ಯಾಪಕ, ರಮಾಕಾಂತ ಪಾತ್ರ ಹಾಗೂ ರಾಜ ಶ್ರೀಧರನ್, ಎರಡು ತಾಂತ್ರಿಕ ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ, ಎಂದರು.

<><><>

ಮಂಗಳೂರಿನ ಕದ್ರಿ ಉದ್ಯಾನವನದಲ್ಲಿ, ಕರಾವಳಿ ಉತ್ಸವದ ಹಿನ್ನೆಲೆ, ರಾಷ್ಟ್ರೀಯ ಚಿತ್ರ– ಶಿಲ್ಪ– ಸಾಂಸ್ಕೃತಿಕ ಮೇಳ, 'ಕಲಾಪರ್ಬ' ಆಯೋಜಿಸಲಾಗಿದೆ. ಕಲಾ ಪರ್ಬಕ್ಕೆ, ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಸಚಿವ, ದಿನೇಶ ಗುಂಡೂರಾವ ಚಾಲನೆ ನೀಡಿ, ವಿವಿಧ ರಾಜ್ಯಗಳ ಶ್ರೇ ್ಠ ಕಲಾಕೃತಿಗಳ ಪ್ರದರ್ಶನ ನಡೆಯುತ್ತಿರುವುದು, ವಿಶೇ ’ ಎಂದರು. ಕಲಾಪರ್ಬದಲ್ಲಿ, 150 ಮಳಿಗೆಗಳಿದ್ದು, ವಿವಿಧ ಜಿಲ್ಲೆಗಳ 120ಕ್ಕೂ ಅಧಿಕ ಕಲಾವಿದರು ಪಾಲ್ಗೊಂಡು, ಐದು ಸಾವಿರಕ್ಕೂ ಅಧಿಕ ಕಲಾಕೃತಿಗಳು, ಮೂರು ದಿನಗಳಲ್ಲಿ ಪ್ರದರ್ಶನಗೊಳ್ಳಲಿವೆ.

<><><>

ಕೇಂದ್ರ ಪುರಸ್ಕೃತ, ವಿಕಸಿತ ಭಾರತ, ಜಿ–ರಾಮ್–ಜಿ ಯೋಜನೆ ಮೂಲಕ, ಒದಗಿಸಲಾಗುವ ಕೂಲಿ ದಿನಗಳನ್ನು, 125 ದಿನಗಳಿಗೆ ಹೆಚ್ಚಿಸಲಾಗಿದೆ; ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಜನೆ ಜೊತೆ, ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಗೆ ಪೂರಕವಾಗಿದೆ ಎಂದು, ಬಳ್ಳಾರಿ ಜಿಲ್ಲಾ ಪಂಚಾಯಿತಿ, ಸಹಾಯಕ ಕಾರ್ಯಕ್ರಮ ಸಂಯೋಜಕ ಎಚ್.ಅಂಬರೀಶ್ ತಿಳಿಸಿದ್ದಾರೆ. ಬಳ್ಳಾರಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ವಿಕಸಿತ ಭಾರತ 2047; ಜಿ–ರಾಮ್–ಜಿ ಸೇರಿದಂತೆ, ಕೇಂದ್ರ ಪುರಸ್ಕೃತ ವಿವಿಧ ಯೋಜನೆಗಳ ಕುರಿತು, ಕೇಂದ್ರ ಸಂವಹನ ಇಲಾಖೆ ಆಯೋಜಿಸಿದ್ದ, ಮಾಧ್ಯಮ ಪ್ರತಿನಿಧಿಗಳ ಕಾರ್ಯಾಗಾರದಲ್ಲಿ, ಅವರು ಮಾತನಾಡಿದರು. ರಸ್ತೆ, ನೀರಾವರಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ಅಗತ್ಯವಾದ, ಮೂಲಸೌಕರ್ಯ ಕಲ್ಪಿಸಲು, ಜಿ–ರಾಮ–ಜಿ ಯೋಜನೆ, ಸಹಕಾರಿ ಎಂದರು.

<><><>

'ಸಾಂಪ್ರದಾಯಿಕ ಜ್ಞಾನದಿಂದ, ಕೃತಕ ಬುದ್ಧಿಮತ್ತೆಯ ಯುಗದವರೆಗೆ' ಧ್ಯೇಯದೊಂದಿಗೆ, ಇಂದು ವಿಶ್ವ 'ಹಿಂದಿ' ಭಾಷೆ ದಿನ. ಪ್ರತಿ ವರ್ಷ ಜನವರಿ 10 ರಂದು, ಹಿಂದಿ ಭಾಷೆಯ ಜಾಗತಿಕ ಪ್ರಸಾರ, ಪ್ರಚಾರದ ಉದ್ದೇಶದಿಂದ, ವಿಶ್ವ ಹಿಂದಿ ಭಾಷೆ ದಿನ ಆಚರಿಸಲಾಗುತ್ತದೆ.

<><><>

ರಾಜ್ಯದಲ್ಲಿ ಹವಾಮಾನ ವೈಪರೀತ್ಯ ಮುಂದುವರೆದಿದೆ. ತೀವ್ರ ಶೀತಗಾಳಿ ಹಿನ್ನೆಲೆ, ಹವಾಮಾನ ಇಲಾಖೆ, ರಾಜ್ಯದ 7 ಜಿಲ್ಲೆಗಳಿಗೆ, ಯೆಲ್ಲೋ ಅಲರ್ಟ್ ಪ್ರಕಟಿಸಿದೆ. ದಾವಣಗೆರೆ, ಗದಗ, ಹಾವೇರಿ, ಬಾಗಲಕೋಟೆ, ಬೀದರ, ಕಲಬುರಗಿ ಹಾಗೂ ವಿಜಯಪುರ ಜಿಲ್ಲೆಗಳಿಗೆ, 48 ಗಂಟೆಗಳ ಕಾಲ ತೀವ್ರ ಚಳಿ ಜೊತೆಗೆ, ತುಂತುರು ಮಳೆಯಾಗಲಿದೆ ಎಂದು, ಮುನ್ನೆಚ್ಚರಿಕೆ ನೀಡಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಭಾರತೀಯ ಹವಾಮಾನ ಇಲಾಖೆ, ರಾಜ್ಯ ನಿರ್ದೇಶಕ ಸಿ.ಎಸ್ ಪಾಟೀಲ.

<><><>

ಸಿ.ಎಸ್ ಪಾಟೀಲ್ ಧ್ವನಿ 43 ಸೆಕೆಂದುಗಳು

<><><>

ಅಖಿಲ ಭಾರತ, ಅಂತರ್ ವಿಶ್ವವಿದ್ಯಾಲಯಗಳ, ಪುರುಷ ಮತ್ತು ಮಹಿಳೆಯರ, 85ನೇ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್, ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯಲ್ಲಿ, ಈ ತಿಂಗಳ 12ನೇ ತಾರೀಖಿನಿಂದ, 16 ರ ವರೆಗೆ ನಡೆಯಲಿದೆ ಎಂದು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ, ಎಂ. ಮೋಹನ ಆಳ್ವ ತಿಳಿಸಿದ್ದಾರೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಭಾರತೀಯ ವಿಶ್ವವಿದ್ಯಾಲಯಗಳ ಸಂಘಟನೆಯ ಸಹಭಾಗಿತ್ವದಲ್ಲಿ, ಮೂಡುಬಿದಿರೆಯ ಸ್ವರಾಜ ಮೈದಾನದಲ್ಲಿ ಕ್ರೀಡಾಕೂಟ ನಡೆಯಲಿದೆ. ದೇಶದ 312 ವಿಶ್ವವಿದ್ಯಾಲಯಗಳ 4 ಸಾವಿರದ 288 ಅಥ್ಲೀಟ್ ಗಳು ಹಾಗೂ ಸಾವಿರಕ್ಕೂ ಹೆಚ್ಚು ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಋತುಚಕ್ರ ನೈರ್ಮಲ್ಯ; ಹದಿಹರೆಯದ ಹೆಣ್ಣುಮಕ್ಕಳಿಗಾಗಿ, 'ಶುಚಿ' ಯೋಜನೆಗೆ ಆರೋಗ್ಯ ಇಲಾಖೆ ಮರುಚಾಲನೆ.

ಕರ್ನಾಟಕ ವಿಶ್ವವಿದ್ಯಾಲಯದ, ಕೌಸಾಳಿ ವ್ಯವಹಾರ ನಿರ್ವಹಣಾ ಸಂಸ್ಥೆಗೆ, ಸುವರ್ಣ ಮಹೋತ್ಸವ ಸಂಭ್ರಮ.

ಮಂಗಳೂರಿನ ಕದ್ರಿ ಉದ್ಯಾನವನದಲ್ಲಿ, ರಾಷ್ಟ್ರೀಯ ಚಿತ್ರ, ಶಿಲ್ಪ ಸಾಂಸ್ಕೃತಿಕ ಮೇಳ, 'ಕಲಾಪರ್ಬ'ಕ್ಕೆ, ಚಾಲನೆ.

ತೀವ್ರ ಶೀತಗಾಳಿ ಹಿನ್ನೆಲೆ, ರಾಜ್ಯದ 7 ಜಿಲ್ಲೆಗಳಿಗೆ, ಮುಂದಿನ 48 ಗಂಟೆಗಳ ವರೆಗೆ, ಯೆಲ್ಲೋ ಅಲರ್ಟ್, ಘೋಷಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>